ದಿನಾಂಕ 03.02.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲು ಃ 1 ನೇ ಪಕ್ಷಗಾರರ ಪರ ವಕೀಲರಾದ ಶ್ರೀ ಎಂ ಹೆಚ್ ರವರಿಂದ ಃ

1) ನಾನು ಮಂಡ್ಯ ವಿಭಾಗದಲ್ಲಿ 3 ರಿಂದ 3 ವರೆ ವರುಷಗಳ ಕಾಲ ಕೆಲಸ ಮಾಡಿದ್ದೇನೆ. enquiry ಗಿಂತ ಮುಂಚೆ ನನಗೆ 1 ನೇ ಪಕ್ಷಗಾರರ ಪರಿಚಯ ಇರಲಿಲ್ಲ. ಸದರಿ ಪ್ರಕರಣವನ್ನು ಹೊರತು ಪಡಿಸಿ ನಾನು ಸಾಕಷ್ಟು ಪ್ರಕರಣದಲ್ಲಿ ವಿಚಾರಣಾ ಅಧಿಕಾರಿಯಾಗಿ ನಾನು ಕೆಲಸ ಮಾಡಿದ್ದೇನೆ. ನಾನು ವಿಚಾರಣ ಅಧಿಕಾರಿಯಾಗಿ ನೇಮಕವಾಗುವ ಮೊದಲು, 1 ನೇ ಪಕ್ಷಗಾರರ ವಿರುದ್ಧ ಹಾಕಿದ್ದ ದೋಷಾರೋಪಣ ಪಟ್ಟಿಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. 1 ನೇ ಪಕ್ಷಗಾರರು, ದಿಃ 06.02.2016 ರಂದು ಇಲಾಖೆಗೆ ಹಾಜರು ಪಡಿಸಿದ್ದ ನಿಪಿ.2 ಪ್ರತ್ಯುತ್ತರದ ಪ್ರತಿಯನ್ನು, ಇಲಾಖೆಯವರು ವಿಚಾರಣೆ ಸಮಯದಲ್ಲಿ, ನನ್ನ ಮುಂದೆ ಹಾಜರು ಮಾಡಿಲ್ಲ. 1 ನೇ ಪಕ್ಷಗಾರರು, ಅವರಿಗೆ ಉಷಾರಿಲ್ಲ ಎಂದು ಹೇಳಿ ಇಲಾಖೆಗೆ ಹಾಜರು ಪಡಿಸಿದ್ದ ರಜೆ ಪತ್ರ ಮತ್ತು ವೈದ್ಯಕೀಯ ದಾಖಲೆಗಳನ್ನು ವಿಚಾರಣೆಯ ಸಮಯದಲ್ಲಿ ಇಲಾಖೆಯವರು ನನ್ನ ಮುಂದೆ ಹಾಜರು ಪಡಿಸಿರಲಿಲ್ಲ.

2) ದಿಃ 03.01.2017, 14.02.2017, 28.02.2017 ಈ ಮೂರು ವಿಚಾರಣೆ ದಿನಾಂಕದಲ್ಲಿ 1 ನೇ ಪಕ್ಷಗಾರರು ವಿಚಾರಣೆಗೆ ಹಾಜರಾಗಿದ್ದು, ಅನಾರೋಗ್ಯದ ಕಾರಣ, ನಾನು ವಿಚಾರಣೆಗೆ ಸಹಕರಿಸಲು ಆಗುವುದಿಲ್ಲ, ಅದ್ದರಿಂದ ಸಮಯವಕಾಶ ಕೊಡಿ ಎಂದು ಕೇಳಿದ್ದರು ಎಂದರೆ ಸರಿ. ಆಗ ನಾನು ಸಮಯವನ್ನು ನಿರಾಕರಿಸಿದ್ದೆನು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ 3 ದಿನಾಂಕದಂದು, ವಿಚಾರಣೆಯಲ್ಲಿ, ನನ್ನ ಮುಂದೆ 1 ನೇ ಪಕ್ಷಗಾರರನ್ನು ಹೊರತು ಪಡಿಸಿ, ಮಂಡನಾಧಿಕಾರಿಯಾಗಲೀ ಅಥವಾ ಸಂಸ್ಥೆಯ ಅಧಿಕಾರಿಯಾಗಲೀ ಹಾಜರಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು, ನನಗೆ ಸರಿಯಾಗಿ ನೆನಪಿಲ್ಲ, ದಾಖಲಾತಿಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. 1 ನೇ ಪಕ್ಷಗಾರರು, ಈ ಮೇಲೆ ಹೇಳಿದ 3 ದಿನಾಂಕದಂದು, ವೈದ್ಯಕೀಯ ದಾಖಲಾತಿಗಳನ್ನು ಹಾಜರು ಪಡಿಸಿದ್ದರು ಎಂದರೆ ಸರಿ. ವೈದ್ಯಕೀಯ ದಾಖಲೆಗಳ ಪ್ರಕಾರ, 1 ನೇ ಪಕ್ಷಗಾರರ ಆರೋಗ್ಯ ಸರಿಯಿರಲಿಲ್ಲ ಮತ್ತು ಅವರು ವಿಚಾರಣೆಗೆ ಸಹಕರಿಸಲು ಆಗುತ್ತಿರಲಿಲ್ಲ ಎಂಬ ವಿಚಾರ ನನ್ನ ಗಮನಕ್ಕೆ ಬಂದಿದ್ದರೂ ಸಹ, ನಾನು ಅವರಿಗೆ ಸಮಯಾವಕಾಶವನ್ನು ಕೊಡದೇ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿದ್ದೆನು ಎಂದರೆ ಸರಿಯಲ್ಲ.

3) 21.03.2017 ರಂದು 1 ನೇ ಪಕ್ಷಗಾರರು, ವಿಚಾರಣೆಗೆ ಬರಲು ಆಗದೇ ಇದ್ದುದರಿಂದ, ಅವರ ಸಹೋದರರನ ಮೂಲಕ, ವಿಚಾರಣೆಯನ್ನು ಮುಂದೂಡಿ, ದಿನಾಂಕವನ್ನು ನಿಗದಿ ಪಡಿಸಬೇಕೆಂದು ಕೋರಿಕೆ ಪತ್ರವನ್ನು ಕಳುಹಿಸಿದ್ದರು ಎಂದರೆ ಸರಿ. 1 ನೇ ಪಕ್ಷಗಾರರು ಕೋರಿಕೆ ಪತ್ರವನ್ನು ಕೊಟ್ಟಿದ್ದರೂ ಸಹ, ಅದನ್ನು ಪರಿಗಣಿಸದೇ, ಆ ದಿನದ ನಡವಳಿಕೆಯನ್ನು ಏಕಪಕ್ಷೀಯವಾಗಿ ಮುಕ್ತಾಯಗೊಳಿಸಿ, ನಂತರ 1 ನೇ ಪಕ್ಷಗಾರರ ಸಹೋದರ ತಡವಾಗಿ ಬಂದು, ವಿಚಾರಣಾ ಅವಧಿ ಮುಗಿದ ನಂತರ ಕೋರಿಕೆ ಪತ್ರವನ್ನು ತಂದು ಹಾಜರು ಪಡಿಸಿದ್ದಾರೆ ಎಂದು ನಾನು ಪ್ರಕರಣದ ಆದೇಶ ಪತ್ರಯಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ.

4) C and D regulations ಪ್ರಕಾರ ವಿಚಾರಣೆಯನ್ನು ನಡೆಸಬೇಕು ಎಂದು ಇದೆ ಎಂದರೆ ಸರಿ. C and D regulations ಪ್ರಕಾರ ಯಾವುದೇ ಒಬ್ಬ ಆಪಾದಿತ ವ್ಯಕ್ತಿ ವಿಚಾರಣೆಗೆ ಹಾಜರಾಗದೇ ಇದ್ದ ಸಂದರ್ಭದಲ್ಲಿ, ಆ ದಿನದ ವಿಚಾರಣೆಯ ನಡವಳಿಕೆಯ ಪ್ರತಿಯನ್ನು ಮತ್ತು ಯಾವುದಾದರೂ ದಾಖಲಾತಿಗಳು ನಿಶಾನೆ ಆಗಿದ್ದರೆ, ಅವುಗಳನ್ನು ಅಂಚೆ ಮೂಲಕ ಆಪಾದಿತನಿಗೆ ಕಳುಹಿಸಿಕೊಡಬೇಕು ಎಂದರೆ ಸರಿ. C and D regulations ಪ್ರಕಾರ, 1 ನೇ ಪಕ್ಷಗಾರರಿಗೆ, ಆ ದಿನದ ವಿಚಾರಣೆಯ ನಡವಳಿಕೆಯ ಪ್ರತಿಯನ್ನು ಮತ್ತು ನಿಶಾನೆಗಳ ದಾಖಲಾತಿಗಳನ್ನು ನಾನು ಕಳುಹಿಸಿದ್ದೆನೋ, ಇಲ್ಲವೋ ಎಂಬುದನ್ನು ದಾಖಲೆಯನ್ನು ಪರಿಶೀಲಿಸಿ ಹೇಳಬೇಕು ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಸ್ವತಃ ನುಡಿಯುತ್ತಾರೆ, ಇಲಾಖೆಯವರು ಕಳುಹಿಸಿರುತ್ತಾರೆ ಎಂದು. ಸದರಿ ಪ್ರಕರಣಕ್ಕೆ, ವಿಚಾರಣೆಯನ್ನು ಮಾಡಿ ಮುಕ್ತಾಯ ಮಾಡುವುದಕ್ಕೆ ಸಮಯವನ್ನು ಪ್ರತ್ಯೇಕವಾಗಿ ನಿಗದಿ ಪಡಿಸಿರಲಿಲ್ಲ ಆದರೆ ಇಲಾಖೆಯಿಂದ ಜನರಲ್ ಸುತ್ತೋಲೆ ಇರುತ್ತದೆ , ಅದರಂತೆ ನಾವು ವಿಚಾರಣೆ ಮಾಡಿ ಮುಕ್ತಾಯ ಮಾಡುತ್ತೇವೆ ಎಂದು ನುಡಿಯುತ್ತಾರೆ.

5) 25.05.2017 ರಂದು 1 ನೇ ಪಕ್ಷಗಾರರು, ನನ್ನ ಮುಂದೆ ಮರು ವಿಚಾರಣೆ ಮಾಡಲು ಕೋರಿ ಒಂದು ಪತ್ರವನ್ನು ಬರೆದಿದ್ದರು ಎಂದರೆ ಸಾಕ್ಷಿಯು, ನನಗೆ ಗೊತ್ತಿಲ್ಲ, ಮರೆತು ಹೋಗಿದೆ, ಕಡತವನ್ನು ಪರಿಶೀಲಿಸಬೇಕು ಎನ್ನುತ್ತಾರೆ. ಈಗ ನನಗೆ ತೋರಿಸಿದ ನಿಪಿ.30 ದಾಖಲಾತಿಯನ್ನು ನಾನು ಈ ಮೊದಲು ನೋಡಿರುವುದಿಲ್ಲ , ಇದೇ ಪ್ರಥಮ ಬಾರಿಗೆ ಈ ನ್ಯಾಯಾಲಯದಲ್ಲಿ ಅದನ್ನು ನೋಡುತ್ತಿದ್ದೇನೆ. 2 ನೇ ಪಕ್ಷಗಾರರು, 1 ನೇ ಪಕ್ಷಗಾರರ ಮೇಲೆ ಸಲ್ಲಿಸಿದ್ದ ಆರೋಪ ಪಟ್ಟಿ ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ. ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದುದ್ದರಿಂದ, ಇಲಾಖೆಗೆ ಸಹಾಯ ಮಾಡಲು, 1 ನೇ ಪಕ್ಷಗಾರರ ವಿರುದ್ಧ ಸಂಸ್ಥೆಗೆ ಸುಳ್ಳು ವರದಿಯನ್ನು ನೀಡಿದ್ದೇನೆ

ಎಂದರೆ ಸರಿಯಲ್ಲ. ವಿಚಾರಣಾ ದಿನಾಂಕಗಳು ನನ್ನ ಗಮನಕ್ಕೆ ಬಂದಿದ್ದರೂ ಸಹ , 1 ನೇ ಪಕ್ಷಗಾರರಿಗೆ self defence ಮಾಡಿಕೊಳ್ಳಲು ಸೂಕ್ತವಾದ ಸಮಯಾವಕಾಶವನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

<u>ಮರ ವಿಚಾರಣೆ ಃಇರುವುದಿಲ್ಲ.</u>

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.